ಕರ್ನಾಟಕ ಸರ್ಕಾರ

ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ

ರಾಷ್ಟ್ರೀಯ ಸೇವಾ ಯೋಜನೆ

ಸಂಖ್ಯೆ:ತಾಶಿಇ/ಎನ್‌ಎಸ್‌ಎಸ್/ಚಟುವಟಿಕೆ/05/2017-18

ಸಂಯೋಜನಾಧಿಕಾರಿಯವರ ಕಛೇರಿ,
ಅರಮನೆ ರಸ್ತೆ ಬೆಂಗಳೂರು-560001
ದಿನಾಂಕ;04-07-2017

## ಸುತ್ತೋಲೆ

ವಿಷಯ: ಕನ್ನಡ ಜಾನಪದ ಪರಿಷತ್ತಿನ ''ವಿಕಾಸಕ್ಕಾಗಿ ಜಾನಪದ'' ಕರ್ಯಕ್ರಮವನ್ನು ರಾಜ್ಯದ ಎನ್ ಎಸ್ ಎಸ್ ಶಿಬಿರಗಳಲ್ಲಿ ಏರ್ಪಡಿಸಿ ನಡೆಸುವ ಕುರಿತು

ಉಲ್ಲೇಖ: ರಾಜ್ಯ ಸರ್ಕಾರದ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಪತ್ರ ಸಂಖ್ಯೆ:ಯುಸೇಇ/ರಾಸೇಯೋ/ಸಾಮನ್ಯ /2017-18/125 ದಿನಾಂಕ.29-06-2017

*****

ಮೇಲಿನ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂದಪಟ್ಟಂತೆ, "ವಿಕಾಸಕ್ಕಾಗಿ ಜಾನಪದ" ಎಂಬ ಕಾರ್ಯಕ್ರಮವನ್ನು ಕನ್ನಡ ಜಾನಪದ ಪರಿಷತ್ತು ಜುಲೈ 2017ರಿಂದ ಪ್ರಾರಂಭಿಸಲು ಯೋಜಿಸಿದೆ. ಜಾನಪದ ಚಟುವಟಿಕೆಗಳು ಹಮ್ಮಿಕೊಳ್ಳುವುದರಿಂದ ಎನ್.ಎಸ್.ಎಸ್. ಶಿಬಿರಾರ್ಥಿಗಳಲ್ಲಿ ನಮ್ಮ ಸಂಸ್ಕೃತಿಯ ಮೂಲ ಬೇರಾದ ಜಾನಪದ ಪರಿಚಯ ಹಾಗೂ ಜಾಗ್ರತಿಯನ್ನು ಮೂಡಿಸುವುದು ಇದರ ಉದ್ದೇಶವೆಂದು ತಿಳಿಸಿರುತ್ತಾರೆ. ಎನ್.ಎಸ್.ಎಸ್. ಶಿಬಿರಗಳಲ್ಲಿ ಜನಪದ ಸಾಹಿತ್ಯ, ಮಹಾ ಕಾವ್ಯಗಳು, ಜನಪದ ಆಟಗಳು, ಜನಪದ ಔಷಧಿ, ಜನಪದ ಆಹಾರ, ಜನಪದ ನಂಬಿಕೆ, ಜನಪದ ನಿಷೇಧ, ಒಗಟು, ಒಡಮ ಹಾಗೂ ಗಾದೆಗಳ ಬಗ್ಗೆ ಅರಿವು ಮೂಡಿಸುವ ಅಗತ್ಯವಿರುತ್ತದೆ. ಇದರಿಂದ 'ವಿಕಾಸಕ್ಕಾಗಿ ಜಾನಪದ' ಎಂಬ ಕಾರ್ಯಕ್ರಮವನ್ನು **ಉಚಿತವಾಗಿ ನೀಡಲಿದ್ದಾರೆ.** ಆದ್ದರಿಂದ, ಈ ಕಾರ್ಯಕ್ರಮವನ್ನು ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದ ಅಡಿಯಲ್ಲಿರುವ ರಾಜ್ಯದ ಎಲ್ಲ ಎನ್.ಎಸ್.ಎಸ್. ಘಟಕಗಳು ಶಿಬಿರಗಳಲ್ಲಿ ಏರ್ಪಡಿಸಲು ಸೂಚಿಸಲಾಗಿದೆ.

ಹೆಚ್ಚಿನ ವಿವರಗಳಿಗೆ ಜಾನಪದ ಪರಿಷತ್‌ನ ರಾಜ್ಯ ಕಾರ್ಯಕಾರಿ ಅಧ್ಯಕ್ಷರಾದ ಡಾ|| ಎಸ್. ಬಾಲಾಜಿ, ಮೊಬೈಲ್ 9900774442, ಇ-ಮೇಲ್ janapadaprapancha@gmail.com ಇವರನ್ನು ಸಂಪರ್ಕಿಸುವುದು.

ನಿರ್ದೇಶಕರು

ಪ್ರತಿಗಳು:

1. ರಾಜ್ಯದ ಎಲ್ಲಾ ಸರ್ಕಾರಿ /ಅನುದಾನಿತ/ಖಾಸಗಿ, , ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರುಗಳಿಗೆ -ಸೂಕ್ತ ಕ್ರಮಕ್ಕಾಗಿ
2. ರಾಜ್ಯ ಸಂಪರ್ಕಾಧಿಕಾರಿ ರಾಷ್ಟ್ರೀಯ ಸೇವಾ ಯೋಜನೆ ಯುವಜನ ಸೇವಾ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
3. ಇ-ಆಡಳಿತ ಅಂತರ್‌ಜಾಲತಾಣದಲ್ಲಿ ಪ್ರಕಟಿಸಲು
4. ಕಛೇರಿ ಕಡತಕ್ಕೆ.